# ಸೂಕ್ತ ಸಮಯ, ಸೂಕ್ತ ಆಸ್ಪತ್ರೆ, ಸೂಕ್ತ ಚಿಕಿತ್ಸೆ: ಗಂಭೀರ ಪಾರ್ಶ್ವವಾಯುವಿಗೆ ದಿವ್ಯೌಷಧಿ

ಶ್ರೀಮತಿ ಪ್ರಭಾ, ಇವರು ಬೆಂಗಳೂರು ಮಲ್ಲೇಶ್ವರಂನ ಶಾಸ್ತ್ರೀಯ ಸಂಗೀತಗಾರ್ತಿ. 50ರ ವಯಸ್ಸಿನ ಇವರಿಗೆ, ದೇಹದ ಬಲಭಾಗ ಹಠತ್ತಾಗಿ ಜಡತ್ವಗೊಂಡು ಅತ್ತಿತ್ತ ಚಲಿಸಲು ತೊಂದರೆಯುಂಟಾಗಿದ್ದಲ್ಲದೇ ಸುಮಾರು 2 ಗಂಟೆಗಳ ಕಾಲ ಮಾತನಾಡಲು ತೊಡಕಾಗಿ, ಬಾಯಿ ಸೊಟ್ಟಗೆ ಓರೆಯಾಗಿದ್ದ ಇವರನ್ನು ಇವರ ಕುಟುಂಬ ಸದಸ್ಯರು ತಕ್ಷಣವೇ ಅವರಲ್ಲಾದ ಈ ಗಂಭೀರ ಬದಲಾವಣೆಯನ್ನು ಅರಿತು ಸಮಯ ವ್ಯರ್ಥ ಮಾಡದೆ ಸಮೀಪದ ಶೇಷಾದ್ರಿಪುರಂನ ಅಪೊಲೋ ಆಸ್ಪತ್ರೆಗೆ ಕರೆತಂದರು.

**ತುರ್ತು ವೈದ್ಯರು ತಕ್ಷಣವೇ ಆಕೆಯ ಚಿಕಿತ್ಸೆಗೆ ಮುಂದಾಗಿ ಅವರಿಗೆ ಸಂಭವಿಸಿದ್ದ ತೀವ್ರ ಮೆದುಳಿನ ಪಾರ್ಶ್ವವಾಯು (ಬ್ರೇನ್ ಅಟ್ಯಾಕ್)ನ ರೋಗ ನಿರ್ಣಯ ಮಾಡಿದ್ದಲ್ಲದೇ ಅವರಿಗಿದ್ದ ತೀವ್ರ ರಕ್ತದೊತ್ತಡವನ್ನು ಸಮರ್ಪಕವಾದ ಔಷಧಗಳನ್ನು ನೀಡಿ ಹತೋಟಿಗೆ ತಂದರು.** ಪಾರ್ಶ್ವವಾಯು ಸ್ಪೆಷಲಿಸ್ಟ್, ಇಂಟರ್‌ವೆನ್ಷನಲ್ ನ್ಯೂರೋ ರೇಡಿಯಾಲಜಿಸ್ಟ್ ಮತ್ತು ನರರೋಗ ಶಸ್ತ್ರಚಿಕಿತ್ಸಕರನ್ನು ಒಳಗೊಂಡ ಎಮರ್ಜೆನ್ಸಿ ಸ್ಟ್ರೋಕ್ ಟೀಮ್ ತಕ್ಷಣವೇ ಕಾರ್ಯಪ್ರವೃತ್ತರಾಗಿ ರೋಗಿಯನ್ನು ಕರೆತಂದ 15 ನಿಮಿಷಗಳ ಒಳಗೆ ಎಂಆರ್‌ಐ ಸ್ಕ್ಯಾನಿಂಗ್ ನಡೆಸಿತು. ಎಂಆರ್‌ಐ ಸ್ಕ್ಯಾನಿಂಗ್ ನಿಂದ ಪ್ರಭಾ ಅವರ ಮೆದುಳಿನ ಪ್ರಮುಖ ರಕ್ತನಾಳಗಳಲ್ಲಿನ ಬ್ಲಾಕ್‌ಗಳನ್ನು ಪತ್ತೆ ಹಚ್ಚಿದರು. ರೋಗಿಯ ಮೆದುಳಿನ ಎಡಭಾಗವೂ ಸಹ ರಕ್ತ ಸಂಚಾರದ ಕೊರತೆ ಉಂಟಾಗಿ ಇಸ್ಕೆಮಿಕ್ ಸ್ಟ್ರೋಕ್ ಅನುಭವಿಸುತ್ತಿದ್ದರು. ಪರಿಸ್ಥಿತಿಯ ಗಂಭೀರತೆಯನ್ನು ರೋಗಿಯ ಸಂಬಂಧಿಕರಿಗೆ ವಿವರಿಸಲಾಯಿತು ಹಾಗೂ ತ್ವರಿತವಾಗಿ ಅವರಿಗೆ ಚಿಕಿತ್ಸೆ ನೀಡಬೇಕೆಂಬ ಮಹತ್ವವನ್ನು ತಿಳಿಸಲಾಯಿತು. **ಹಾಗೆಯೇ ರೋಗಿಯ ಸಂಬಂಧಿಕರೂ ಸಹ ತಮ್ಮ ಕಣ್ಣ ಮುಂದೆಯೇ ತೀವ್ರವಾಗಿ ಹದಗೆಡುತ್ತಿರುವ ಪ್ರಭಾ ಅವರ ಆರೋಗ್ಯ ಸ್ಥಿತಿಯನ್ನು ಕಂಡು ಅವರ ತ್ವರಿತ ಚಿಕಿತ್ಸೆಗೆ ಶೀಘ್ರವೇ ಒಪ್ಪಿಗೆ ನೀಡಿದರು. ಎಮರ್ಜೆನ್ಸಿ ಸ್ಟ್ರೋಕ್ ಟೀಮ್ ಮೆದುಳಿನಲ್ಲಾದ ತಡೆಯನ್ನು ನಿವಾರಿಸಲು ತಕ್ಷಣವೇ ಚುಚ್ಚುಮದ್ದನ್ನು (ಕ್ಲಾಟ್ ಬಸ್ಟರ್) ನೀಡಿ ಅವರನ್ನು ಇಂಟರ್ವೆನ್ಷನಲ್ ನ್ಯೂರೋರೇಡಿಯಾಲಜಿ ವಿಭಾಗಕ್ಕೆ ಮೆಕಾನಿಕಲ್ ಥ್ರೋಮ್‌ಬೆಕ್ಟಮಿಯ ಮೂಲಕ ಮೆದುಳಿನಲ್ಲಾದ ತಡೆಯನ್ನು ನಿವಾರಿಸಲು ಸಹಕಾರಿಯಾಗುವಂತೆ ಕ್ಯಾತ್‌ಲ್ಯಾಬ್‌ಗೆ ಸ್ಥಳಾಂತರಿಸಿದರು.**

ಸಾಮಾನ್ಯವಾಗಿ ಮೆದುಳಿನ ಆಘಾತ ಕಡಿಮೆ ಪ್ರಮಾಣದಲ್ಲಿದ್ದಾಗ ಕೇವಲ ಕ್ಲಾಟ್ ಬಸ್ಟಿಂಗ್ ಚುಚ್ಚುಮದ್ದನ್ನು ನೀಡಿದರೆ ಸಾಕಾಗುತ್ತದೆ ಆದರೆ






ಮೆದುಳಿನ ರಕ್ತನಾಳಗಳ ತಡೆ ತೀವ್ರತರವಾಗಿದ್ದು ಗಂಭೀರ ಪ್ರಮಾಣದಲ್ಲಿ ಆಘಾತವಾಗಿದ್ದಾಗ ಅಂತಹದನ್ನು ನಿವಾರಿಸಲು ಪೂರಕ ಎಂಡೋವ್ಯಾಸ್ಕುಲರ್ ಚಿಕಿತ್ಸೆಯ ಅಗತ್ಯವಿರುತ್ತದೆ.

**ಪ್ರಮುಖ ಪಾರ್ಶ್ವವಾಯು ಪ್ರಕರಣಗಳಲ್ಲಿ ನ್ಯೂರೋರೇಡಿಯಾಲಜಿಸ್ಟ್ ಮೆದುಳಿಗೆ ಸಂಬಂಧಿಸಿದ ರಕ್ತನಾಳಗಳಲ್ಲಾದ ತಡೆಯನ್ನು ನಿವಾರಿಸಲು ತೊಡೆಯಲ್ಲಿ ಕೇವಲ ಒಂದು ಪಿನ್ ಚುಚ್ಚುವ ಮುಖಾಂತರ ಮೆದುಳನ್ನು ತಲುಪಿ ವಿಶೇಷವಾಗಿ ಈ ಉದ್ದೇಶಕ್ಕಾಗಿ ವಿನ್ಯಾಸ ಮಾಡಲಾದ ಪರಿಕರಗಳನ್ನು ಬಳಸಿ (ಮೆಕಾನಿಕಲ್ ಥ್ರೋಮ್‌ಬೆಕ್ಟಮಿ) ಚಿಕಿತ್ಸೆ ನೀಡುತ್ತಾರೆ. ಮೆದುಳಿನ ಇಂತಹ ಗಂಭೀರ ಪ್ರಮಾಣದ ಚಿಕಿತ್ಸೆಗೆ ವ್ಯಕ್ತಿ ದಾಖಲಾದ ಕ್ಷಿಪ್ರ ಗೋಲ್ಡನ್ ಹವರ್ ನಲ್ಲಿ ನೀಡುವಂತಹ ಚಿಕಿತ್ಸೆಯೇ ಮೆಕಾನಿಕಲ್ ಥ್ರೋಮ್‌ಬೆಕ್ಟಮಿ.**

ಇಂತಹ ಚಿಕಿತ್ಸೆಯನ್ನು ಪ್ರಭಾ ಅವರಿಗೆ ನೀಡಿ 30 ನಿಮಿಷಗಳಲ್ಲಿಯೇ ಈ ಪ್ರಕ್ರಿಯೆಯನ್ನು ಮುಗಿಸಿ ತಕ್ಷಣವೇ ಅವರನ್ನು ಮುಂದಿನ ಆರೈಕೆಗಾಗಿ ಮತ್ತು ಅವರ ಅಧಿಕ ರಕ್ತದೊತ್ತಡ ನಿಯಂತ್ರಣಕ್ಕಾಗಿ ತೀವ್ರ ನಿಗಾ ಘಟಕಕ್ಕೆ ಸ್ಥಳಾಂತರಿಸಲಾಯಿತು. ಇದಾದ ನಂತರ ರೋಗಿಯ ಬಲಗೈ ಚಲನೆಯಲ್ಲಿ ಗಣನೀಯವಾದ ಸುಧಾರಣೆ ಕಂಡುಬಂದಿತು ಅಲ್ಲದೇ ಚಿಕಿತ್ಸೆ ನಡೆಸಿದ ಒಂದು ತಾಸಿನಲ್ಲಿಯೇ ಅವರ ಕಾಲುಗಳು ಸಹ ಸ್ವಾಧೀನಕ್ಕೆ ಬರಲಾರಂಭಿಸಿತು. ಕ್ರಮೇಣ ಮುಂದಿನ ಎರಡು ದಿನಗಳಲ್ಲಿ ಪೂರ್ಣ ಚೇತರಿಕೆ ಕಂಡುಬಂದಿತು. ಈ ಹಂತದಲ್ಲಿಯೇ ಅವರ ಮಾತುಗಳಲ್ಲಿಯೂ ಸಹ ಸುಧಾರಣೆ ಆರಂಭಗೊಂಡಿತು. ಯಾರ ನೆರವನ್ನೂ ಪಡೆದುಕೊಳ್ಳದೇ ಸ್ವತಃ ತಾವೇ ನಡೆದುಕೊಂಡು ಆಸ್ಪತ್ರೆಯಿಂದ ಮನೆಯ ಕಡೆಗೆ ಪ್ರಭಾ ಹೊರಟರು. ಇನ್ನೂ ಹೆಚ್ಚಿನ ಚೇತರಿಕೆಗಾಗಿ ಮುಂದೆ ಅವರು ನಿಯಮಿತವಾಗಿ ನಡೆಯುವ ಚಿಕಿತ್ಸೆ ಮತ್ತು ಫಿಸಿಯೋಥೆರಪಿಗೆ ಬರಲಾರಂಭಿಸಿದರು. ಒಂದು ತಿಂಗಳಿನ ನಂತರ ಅವರು ಆಸ್ಪತ್ರೆಗೆ ಸ್ವತಂತ್ರವಾಗಿ ಬಂದು ತಪಾಸಣೆಗೆ ಒಳಪಟ್ಟು ತಮ್ಮ ಎಂದಿನಂತೆ ನಡೆಯುವ ಸಾಮರ್ಥ್ಯ ಪಡೆದುಕೊಂಡರು.

ಮುಂದೆ ಪ್ರಭಾ ಅವರು ತಮ್ಮ ದಿನನಿತ್ಯದ ಜೀವನಶೈಲಿಗೆ ಮುಂದಾದರು ಅಲ್ಲದೇ ತಮ್ಮ ಸಂಗೀತ ತರಗತಿಗಳನ್ನು ಪುನರಾರಂಭಿಸಿದರು.

ಹೀಗೆ ಪ್ರಭಾ ಅವರು ಇಂತಹ ಪ್ರಾಣಾಂತಿಕ ಕಾಯಿಲೆಯನ್ನು ಕೇವಲ ತಮ್ಮ ಕುಟುಂಬ ಸದಸ್ಯರ ಜಾಗೃತಿ ಮತ್ತು ಬೆಂಬಲದಿಂದಾಗಿ ಜಯಿಸಿ ಬಂದರು. ಕುಟುಂಬದ ಸದಸ್ಯರು ಸಮಯ ಪ್ರಜ್ಞೆಯಿಂದ ಕಾಯಿಲೆ ಕಾಣಿಸಿಕೊಂಡ ತಕ್ಷಣವೇ ಗೋಲ್ಡನ್ ಹವರ್ ಎಂದು ಕರೆಯಲ್ಪಡುವ ಅತಿ ಸೂಕ್ಷ್ಮ ಸಮಯದಲ್ಲಿಯೇ ಅವರನ್ನು ಆಸ್ಪತ್ರೆಗೆ ದಾಖಲಿಸಿದರು.

* * *

ಡಾ. ಶರತ್ ಕುಮಾರ್ ಜಿ.ಜಿ., ಇಂಟರ್‌ವೆನ್ಷನಲ್ ನ್ಯೂರೋ ರೇಡಿಯಾಲಜಿಸ್ಟ್ ಅವರು **"ಇಂತಹ ಪರಿಣಾಮಕಾರಿ ಫಲಿತಾಂಶಕ್ಕೆ ಏಕೈಕ ಮುಖ್ಯ ಕಾರಣವೆಂದರೆ ಅವರ ಕುಟುಂಬ ಸದಸ್ಯರ ಸಮಯಪ್ರಜ್ಞೆ (ಖ್ಯಾತ ನುರಿತ ತಜ್ಞರಿಂದ ಕೂಡಿದ ಎಲ್ಲ ಬಗೆಯ ಆಘಾತಗಳನ್ನು ನಿರ್ವಹಿಸಲು ಸಮರ್ಥ ಆಸ್ಪತ್ರೆ) ಮತ್ತು ಸೂಕ್ತ ಆಸ್ಪತ್ರೆಯಲ್ಲಿ ಸರಿಯಾದ ಗೋಲ್ಡನ್ ಹವರ್ (ಆಘಾತ ಕಂಡು ಬಂದ ಮೊದಲ 6 ತಾಸುಗಳು) ಗೆ ಸುಸಜ್ಜಿತ ಆಸ್ಪತ್ರೆಗೆ ದಾಖಲಿಸಬೇಕು** ಎಂದರು.

ಹಲವಾರು ಜನರಿಗೆ ಪಾರ್ಶ್ವವಾಯುವನ್ನು ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸಬಹುದು ಎಂದು ತಿಳಿದಿರುವುದಿಲ್ಲ ಮತ್ತು ಕಾಯಿಲೆಯನ್ನು ಆರಂಭಿಕ ಹಂತದಲ್ಲಿ ಗುರುತಿಸುವುದು ಸಹ ಅತ್ಯಂತ ಪ್ರಮುಖವಾಗಿದೆ. ರೋಗಿಯ ದೇಹದಲ್ಲಿ ಬಲಹೀನವಾಗಿ ಪಾರ್ಶ್ವವಾಯು ಅಸ್ತಿತ್ವದಲ್ಲಿರಬಹುದು, ತಡವರಿಕೆಯ ಮಾತುಗಳು, ಬಾಯಿ ಓರೆಯಾಗುವುದು ಮತ್ತು ದೇಹ ನಿಯಂತ್ರಣ ಕಳೆದುಕೊಳ್ಳುವುದು ಇತ್ಯಾದಿ. ಹೃದಯಾಘಾತದಂತೆಯೇ ಮೆದುಳಿನ ಆಘಾತವೂ ಸಹ ಆರಂಭಿಕವಾಗಿ ನೋವು ರಹಿತವಾಗಿ ಕಾಣಿಸಿಕೊಳ್ಳುತ್ತದೆ ಎಂಬುದು ಗಮನಾರ್ಹ. ಈ ಕುರಿತು ರೋಗಿ ಏನನ್ನೂ ಹೇಳಿಕೊಳ್ಳದೇ ಇರಬಹುದು.

**ಸಮಯ ಎನ್ನುವುದು ಅತ್ಯಂತ ನಿರ್ಣಾಯಕವಾಗಿದ್ದು, ಒಂದೊಂದು ನಿಮಿಷದ ವಿಳಂಬವೂ ಮೆದುಳು ತನ್ನ ಸರಿಸುಮಾರು ಎರಡು ದಶಲಕ್ಷ ನ್ಯೂರಾನ್‌ಗಳನ್ನು ಕಳೆದುಕೊಳ್ಳಬಹುದಾದ ಸಂಭವವಿರುತ್ತದೆ. ಹೀಗಾಗಿ ದೊರೆಯುವ ಅಲ್ಪ ಸಮಯದಲ್ಲೇ ಮೆದುಳನ್ನು ಕಾಪಾಡಿಕೊಳ್ಳ ಬೇಕಾಗುತ್ತದೆ. ಒಂದುವೇಳೆ ರೋಗಿಯು ಗೋಲ್ಡನ್ ಹವರ್ ನಲ್ಲಿ ಸೂಕ್ತ ಆಸ್ಪತ್ರೆಗೆ ದಾಖಲಾಗದೇ ಹೋದಲ್ಲಿ ನೀಡಿದ ಚಿಕಿತ್ಸೆ ಪರಿಣಾಮಕಾರಿಯಾಗದೆ ಹೋಗಬಹುದು. ಆರೋಗ್ಯಕರ ಜೀವನಶೈಲಿ, ಮಧುಮೇಹದ ನಿಯಂತ್ರಣ, ಅಧಿಕ ರಕ್ತದೊತ್ತಡ ಮತ್ತು ಅಧಿಕ ಕೊಬ್ಬಿನಾಂಶ ನಿಯಂತ್ರಣ ಹೊಂದಿರುವಿಕೆ ಹಾಗೂ ಧೂಮಪಾನ ಮಾಡದಿರುವಿಕೆಯಿಂದ ಪಾರ್ಶ್ವವಾಯುವನ್ನು ತಡೆಗಟ್ಟಬಹುದು"** ಎಂದು **ಹೇಳುತ್ತಾರೆ.**

**ಡಾ. ಶರತ್ ಕುಮಾರ್ ಜಿ.ಜಿ**
ಇಂಟರ್‌ವೆನ್ಷನಲ್ ನ್ಯೂರೋ ರೇಡಿಯಾಲಜಿಸ್ಟ್

Apollo HOSPITALS — SHESHADRIPURAM —

**#1, ಪ್ಲಾಟ್‌ಫಾರಂ ರಸ್ತೆ, ಮಂತ್ರಿ ಮಾಲ್ ಹತ್ತಿರ, ಶೇಷಾದ್ರಿಪುರಂ, ಬೆಂಗಳೂರು – 560 020**

**+91 95352 57374** **bangalore.apollohospitals.com**